KARN320008622012

Presented on : 18-09-2012
Registered on : 18-09-2012
Decided on : 05-02-2024
Duration : 11 years, 4 months, 17 days

**1 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ಕನಕಪುರ.**

**ಉಪಸ್ಥಿತರು :**
**ಸವಿತ ರುದ್ರಗೌಡ ಚಿಕ್ಕನಗೌಡರ್.,** ಬಿ.ಎ, ಎಲ್.ಎಲ್.ಬಿ.,
**1 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,**
**ಕನಕಪುರ.**

**ದಿನಾಂಕ: 05 ನೇ ಫೆಬ್ರುವರಿ 2024**

**ಅಪರಾಧಿಕ ಪ್ರಕರಣ : 864/2012**

**ಪಿರ್ಯಾದಿ** : ರಾಜ್ಯ ಸರ್ಕಾರ –

ಅಬಕಾರಿ ಉಪನಿರೀಕ್ಷಕರು ಕನಕಪುರ ವಲಯ

**(ಪ್ರತಿನಿಧಿಸುವವರು ಸ.ಸ.ಅಭಿಯೋಜಕರು)**

ವಿರುದ್ಧ

**ಆರೋಪಿತರುಗಳು** : ಶಿವಕುಮಾರ
ಬಿನ್ ಎಂ.ಸಿ.ಕೆಂಪಯ್ಯ
ವಯಸ್ಸು 32 ವರ್ಷಗಳು,

ವಾಸಃ ಮುಳ್ಳಹಳ್ಳಿ ಗ್ರಾಮ,

ಉಯ್ಯಂಬಳ್ಳಿ ಹೋಬಳಿ,

ಕನಕಪುರ ತಾಲ್ಲೂಕು.

{ಪ್ರತಿನಿಧಿಸುವವರು ಶ್ರೀ.ಸಿ.
ಎಂ.ಜಗದೀಶ್ ವಕೀಲರು}

| | |
|---|---|
| ಅಪರಾಧ ನಡೆದ ದಿನಾಂಕ | 05.06.2012 |
| ಅಪರಾಧ ವರದಿ ಮಾಡಿದ ದಿನಾಂಕ | 05.06.2012 |
| ದೂರುದಾರರ ಹೆಸರು | ಶ್ರೀ.ಕೇಶವಮೂರ್ತಿ |
| ಸಾಕ್ಷಿದಾರರ ವಿಚಾರಣೆಗೆ ಪ್ರಾರಂಭಿಸಿದ ದಿನಾಂಕ | 14.10.2019 |
| ಸಾಕ್ಷಿದಾರರ ವಿಚಾರಣೆ ಮುಕ್ತಾಯದ ದಿನಾಂಕ | 07.12.2023 |
| ಅಪರಾಧ ಕಲಂಗಳು | ಕರ್ನಾಟಕ ಅಬಕಾರಿ ಕಾಯ್ದೆ 1965 ಕಲಂ.11, 13, 14, 32 ಮತ್ತು 34 |
| **ತೀರ್ಪು** | **ಆರೋಪದಿಂದ ದೋಷಮುಕ್ತಗೊಳಿಸಿ ಬಿಡುಗಡೆಗೊಳಿಸಲಾಗಿದೆ.** |

**(ಸವಿತ ರುದ್ರಗೌಡ ಚಿಕ್ಕನಗೌಡರ್)**
**1ನೇ ಅಪರ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ., ಕನಕಪುರ.**

**ತೀರ್ಪು**

ಅಬಕಾರಿ ಉಪನಿರೀಕ್ಷಕರು ಕನಕಪುರ ವಲಯ ರವರು ಆರೋಪಿಯ ವಿರುದ್ಧ ಕರ್ನಾಟಕ ಅಬಕಾರಿ ಕಾಯ್ದೆ 1965 ಕಲಂ.14, 15, 32 ಮತ್ತು 43 ರ ಅಡಿಯಲ್ಲಿ ಅಪರಾಧವೆಸಗಿದ್ದಾರೆಂದು ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

2. **ಅಭಿಯೋಜನಾ ಪಕ್ಷದ ಪ್ರಕರಣದ ಸಾರಾಂಶವೇನೆಂದರೆ** :

ಅಬಕಾರಿ ಠಾಣೆ ಕನಕಪುರ ವಲಯ ಸರಹದ್ದು ಕನಕಪುರ ತಾಲ್ಲೂಕು, ದಿನಾಂಕ.05.06.2012 ರಂದು ಸಂಜೆ ಸುಮಾರು 04.00 ಗಂಟೆ ಸಮಯದಲ್ಲಿ, ಮುಳ್ಳಹಳ್ಳಿ ಗ್ರಾಮದಲ್ಲಿ, ಆರೋಪಿಗೆ ಸೇರಿರುವ ಅಂಗಡಿಯ ಮನೆಯಲ್ಲಿ 180 ಎಂ.ಎಲ್. ನ ಒರಿಜಿನಲ್ ಚಾಯ್ಸ್ ವಿಸ್ಕಿ 48 ಪ್ಯಾಕ್ ಗಳು ಮತ್ತು 330 ಎಂ.ಎಲ್. ನ ಕಿಂಗ್ ಫಿಶರ್ ಸ್ಟ್ರಾಂಗ್ ಬಿಯರ್ 24 ಟಿನ್ ಗಳನ್ನು ಯಾವುದೇ ಪರವಾನಗಿ ಇಲ್ಲದೆ ಮಾರಾಟ ಮಾಡಲು ಅಕ್ರಮವಾಗಿ ದಾಸ್ತಾನು ಮಾಡಿಟ್ಟುಕೊಂಡಿರುತ್ತಾರೆ ಎಂದು ಆರೋಪಿಸಿ ಪ್ರಕರಣವನ್ನು ದಾಖಲಿಸಿರುತ್ತಾರೆ.

3. ತನಿಖಾಧಿಕಾರಿಯು ತನಿಖೆಯನ್ನು ಪೂರ್ಣಗೊಳಿಸಿ ಮೇಲೆ ಹೇಳಿದ ಆರೋಪದಡಿ ಆರೋಪಿಯ ವಿರುದ್ಧ ಅಂತಿಮ ದೋಷಾರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿಕೊಂಡಿರುತ್ತಾರೆ. ನಂತರ ಆರೋಪಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಜಾಮೀನಿನ ಮೇಲೆ ಬಿಡುಗಡೆಗೊಂಡರು. ಅಭಿಯೋಜನೆಯ ಪ್ರಕರಣದ ಯಥಾಪ್ರತಿಯನ್ನು ಕಲಂ.207 ಭಾರತೀಯ ದಂಡ ಪ್ರಕ್ರಿಯಾ ಸಂಹಿತೆ ರೀತ್ಯಾ ಒದಗಿಸಲಾಯಿತು. ಆರೋಪಿಯು ತಮ್ಮ ಮೇಲೆ ಹೊರಿಸಲಾದ ಮೇಲ್ಕಂಡ ಅಪರಾಧಗಳನ್ನು ಕೇಳಿ ತಿಳಿದುಕೊಂಡು, ನಿರಾಕರಿಸಿ ವಿಚಾರಣೆ ಆಗಬೇಕೆಂದು ಮಂಡಿಸಿದರು.

4. ಆರೋಪಿಯ ಮೇಲಿನ ಆರೋಪವನ್ನು ರುಜುವಾತುಪಡಿಸುವ ಸಲುವಾಗಿ ಅಭಿಯೋಜನಾ ಪಕ್ಷವು ಪ್ರಾಸಾ-1 ರಿಂದ 5 ರವರ ಮೌಖಿಕ ಸಾಕ್ಷ್ಯ ವಿಚಾರಣೆಯನ್ನು ಮತ್ತು ನಿಶಾನೆ ಪಿ-1 ರಿಂದ 8 ರವರೆಗೆ ದಾಖಲಾತಿ ಸಾಕ್ಷ್ಯಗಳನ್ನು ಹಾಗೂ ಮುದ್ದೆಮಾಲು-1 ಮತ್ತು 2 ನ್ನು ಗುರುತು

ಪಡಿಸಿಕೊಂಡಿರುತ್ತದೆ. ಅಭಿಯೋಜನೆಯ ಪರ ಸಾಕ್ಷಿ ವಿಚಾರಣೆ ಮುಗಿದ ನಂತರ, ಆರೋಪಿತನ ಹೇಳಿಕೆಯನ್ನು ದಂಡ ಪ್ರಕ್ರಿಯಾ ಸಂಹಿತೆ 313 ರಡಿಯಲ್ಲಿ ದಾಖಲಿಸಿಕೊಂಡಿದ್ದು, ಆರೋಪಿತನು ಅಭಿಯೋಜನೆಯ ಪರ ಸಾಕ್ಷ್ಯವನ್ನು ಅಲ್ಲಗಳೆದಿದ್ದು, ತಮ್ಮ ಪರವಾಗಿ ಯಾವುದೇ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯವಿರುವುದಿಲ್ಲವೆಂದು ಹೇಳಿರುತ್ತಾರೆ.

5. ಕಡತದಲ್ಲಿನ ಲಭ್ಯ ದಾಖಲೆಗಳ ಆಧಾರದ ಮೇರೆಗೆ ನ್ಯಾಯಾಲಯ ಪರಿಗಣಿಸಬೇಕಾದ ಅಂಶಗಳು ಈ ಕೆಳಕಂಡಂತೆ ಮೂಡಿಬಂದವುಃ-

**ಅಂಶಗಳು**

1) ಅಬಕಾರಿ ಠಾಣೆ ಕನಕಪುರ ವಲಯ ಸರಹದ್ದು ಮುಳ್ಳಹಳ್ಳಿ ಗ್ರಾಮದಲ್ಲಿ, ದಿನಾಂಕ.05.06.2012 ರಂದು ಸಂಜೆ ಸುಮಾರು 04.00 ಗಂಟೆ ಸಮಯದಲ್ಲಿ, ಆರೋಪಿಗೆ ಸೇರಿರುವ ಅಂಗಡಿಯ ಮನೆಯಲ್ಲಿ 180 ಎಂ.ಎಲ್. ನ ಒರಿಜಿನಲ್ ಚಾಯ್ಸ್ ವಿಸ್ಕಿ 48 ಪ್ಯಾಕ್ ಗಳು ಮತ್ತು 330 ಎಂ.ಎಲ್. ನ ಕಿಂಗ್ ಫಿಶರ್ ಸ್ಟ್ರಾಂಗ್ ಬಿಯರ್ 24 ಟಿನ್ ಗಳನ್ನು ಯಾವುದೇ ಪರವಾನಗಿ ಇಲ್ಲದೆ ಮಾರಾಟ ಮಾಡಲು ಅಕ್ರಮವಾಗಿ ದಾಸ್ತಾನು ಮಾಡಿಟ್ಟುಕೊಂಡಿದ್ದು, ಸದರಿ ಅಪರಾಧವು ಕರ್ನಾಟಕ ಅಬಕಾರಿ ಕಾಯ್ದೆ 1965 ಕಲಂ.11, 13, 14, 32 ಮತ್ತು 34 ರೀತ್ಯಾ ಶಿಕ್ಷಾರ್ಹ ಅಪರಾಧವಾಗಿರುತ್ತದೆ ಎಂದು ಅಭಿಯೋಜನೆಯು ನಿಸ್ಸಂದೇಹವಾಗಿ ರುಜುವಾತು ಪಡಿಸುತ್ತದೆಯೇ?

2) ಮಾಡುವ ಆದೇಶ ಏನು ?

6. ನನ್ನ ತೀರ್ಮಾನಕ್ಕೆ ಉದ್ಭವಿಸಿರುವ ಈ ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಿಸಿರುತ್ತೇನೆ.

**ಅಂಶ ಸಂಖ್ಯೆ 1 - ನಕಾರಾತ್ಮಕವಾಗಿ**

**ಅಂಶ ಸಂಖ್ಯೆ 2 - ಅಂತಿಮ ಆದೇಶದಂತೆ**

**ಈ ಕೆಳಕಂಡ ಕಾರಣಗಳಿಗಾಗಿ :**

**ಃಃ ಕಾರಣಗಳು ಃಃ**

7. **ಅಂಶ ಸಂಖ್ಯೆ.1**: ಚಾಸಾ-1/ಪ್ರಾಸಾ-1/ಶ್ರೀ.ಮಹದೇವಯ್ಯ ಬಿನ್ ಮಸಣಯ್ಯ ರವರು ಪಂಚನಾಮೆ ಸಾಕ್ಷಿದಾರರು ತಮ್ಮ ಮುಖ್ಯ ವಿಚಾರಣೆಯಲ್ಲಿ, ಆರೋಪಿ ನನಗೆ ಗೊತ್ತಿಲ್ಲ, ಚಾಸಾ-5 ರವರು ಗೊತ್ತಿಲ್ಲ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ ಮತ್ತು ಯಾವುದೇ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡಿಲ್ಲ ಎಂದು ಸ್ಪಷ್ಟವಾಗಿ ನುಡಿದಿರುತ್ತಾರೆ. ಅಭಿಯೋಜನೆಯು ಸದರಿ ಸಾಕ್ಷಿದಾರನನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ನ್ಯಾಯಾಲಯದ ಅನುಮತಿ ಪಡೆದು ಪಾಟೀಸವಾಲನ್ನು ಮಾಡಿದ್ದು, ಸದರಿ ಪಾಟೀಸವಾಲಿನಲ್ಲಿ ಅಭಿಯೋಜನೆಯು ತನ್ನ ಪ್ರಕರಣಕ್ಕೆ ಪೂರಕವಾಗುವಂತಹ ಯಾವುದೇ ಸಂಗತಿಗಳನ್ನು ಸಾಕ್ಷಿಯಿಂದ ಹೊರತರುವಲ್ಲಿ ವಿಫಲವಾಗಿರುತ್ತದೆ.

8. ಚಾಸಾ-2/ಪ್ರಾಸಾ-2/ಶ್ರೀ.ಚಿಕ್ಕಮಾಳಗಯ್ಯ ಬಿನ್ ಚಿಕ್ಕಣ್ಣ ರವರು ಪಂಚನಾಮೆ ಸಾಕ್ಷಿದಾರರು ತಮ್ಮ ಮುಖ್ಯ ವಿಚಾರಣೆಯಲ್ಲಿ, ಆರೋಪಿ ನನಗೆ ಗೊತ್ತು, ಚಾಸಾ-5 ರವರು ಗೊತ್ತಿಲ್ಲ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ ಮತ್ತು ಯಾವುದೇ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡಿಲ್ಲ, ನಿಪಿ-1 ರಲ್ಲಿರುವ ಸಂಗತಿಗಳು ನನಗೆ ಗೊತ್ತಿರುವುದಿಲ್ಲ ಎಂದು ಸ್ಪಷ್ಟವಾಗಿ ನುಡಿದಿರುತ್ತಾರೆ. ಸಾಕ್ಷಿಯು ದಾಳಿ

ಪಂಚನಾಮೆಯನ್ನು, ಮಾದರಿ ಸೀಲನ್ನು ಮತ್ತು ಅದರಲ್ಲಿರುವ ತನ್ನ ಹೆಬ್ಬೆಟ್ಟಿನ ಗುರುತನ್ನು ಗುರುತಿಸಿದ ಮೇರೆಗೆ ದಾಳಿ ಪಂಚನಾಮೆಯನ್ನು ನಿಪಿ-1 ಎಂದು, ಮಾದರಿ ಸೀಲನ್ನು ನಿಪಿ-2 ಎಂದು ಹಾಗೂ ಒಂದು ಸೀಸೆ ಮತ್ತು ಟಿನ್ನನ್ನು ಮುದ್ದೆಮಾಲು-1 ಮತ್ತು 2 ಎಂದು ದಾಖಲಾತಿ ಸಾಕ್ಷ್ಯಗಳನ್ನು ಗುರುತಿಸಲಾಯಿತು. ಅಭಿಯೋಜನೆಯು ಸದರಿ ಸಾಕ್ಷಿದಾರನನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ನ್ಯಾಯಾಲಯದ ಅನುಮತಿ ಪಡೆದು ಪಾಟೀಸವಾಲನ್ನು ಮಾಡಿದ್ದು, ಸದರಿ ಪಾಟೀಸವಾಲಿನಲ್ಲಿ ಅಭಿಯೋಜನೆಯು ತನ್ನ ಪ್ರಕರಣಕ್ಕೆ ಪೂರಕವಾಗುವಂತಹ ಯಾವುದೇ ಸಂಗತಿಗಳನ್ನು ಸಾಕ್ಷಿಯಿಂದ ಹೊರತರುವಲ್ಲಿ ವಿಫಲವಾಗಿರುತ್ತದೆ.

9. ಚಾಸಾ-5/ಪ್ರಾಸಾ-3/ಶ್ರೀ.ಕೇಶವಮೂರ್ತಿ ರವರು ಪ್ರಕರಣವನ್ನು ದಾಖಲಿಸಿ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ದಿಃ05.06.2012 ರಂದು ಬಂದ ಮಾಹಿತಿ ಮೇರೆಗೆ, ಸಿಬ್ಬಂದಿಯ ಜೊತೆ ಸಂಖ್ಯೆ.ಕೆಎ-01-4551 ರ ಸರ್ಕಾರಿ ವಾಹನದಲ್ಲಿ ಮುಳ್ಳಹಳ್ಳಿ ಗ್ರಾಮಕ್ಕೆ ಭೇಟಿ ನೀಡಿ, ಅಲ್ಲಿ ಗ್ರಾಮಸ್ಥರನ್ನು ಬರಮಾಡಿಕೊಂಡು, ನ್ಯಾಯಲಯದ ಪರವಾನಿಗೆಯನ್ನು ಪಡೆಯಲು ಆಗದ ಕಾರಣ ಅಲ್ಲಿಯೇ ಶೋಧನಾ ವಾರೆಂಟನ್ನು ತಯಾರಿಸಿ, ಸಾಕ್ಷಿಗಳ ಮತ್ತು ನನ್ನ ಸಹಿಯನ್ನು ಮಾಡಿ ಒಳಗೆ ಪ್ರವೇಶ ಮಾಡಲು ಆರೋಪಿಯು ಅಂಗಡಿಯ ಮುಂದೆ ನಿಂತಿದ್ದು, ಓಡಿ ಹೋಗಲು ಪ್ರಯತ್ನಿಸಿದಾಗ ಹಿಡಿದು ಹೆಸರನ್ನು ಕೇಳಲಾಗಿ, ಶಿವಕುಮಾರ್ ಎಂದು ತಿಳಿಸಿ, ಅಂಗಡಿ ಮಳಿಗೆ ಯಾರದ್ದು ಎಂದು ವಿಚಾರಿಸಲಾಗಿ ನಮ್ಮದೇ ಎಂದು ತಿಳಿಸಿದ್ದು, ರಟ್ಟಿನ ಬಾಕ್ಸನ್ನು ಪರಿಶೀಲಿಸಲಾಗಿ ಒ.ಸಿ. ವಿಸ್ಕಿ 180 ಎಂ.ಎಲ್. ನ 48 ಪ್ಯಾಕ್ ಗಳು ಮತ್ತು ಇನ್ನೊಂದು ಬಾಕ್ಸ್ ನಲ್ಲಿ ಕಿಂಗ್ ಫಿಶರ್ 24 ಟಿನ್ ಗಳು, ಒಟ್ಟು

8.64 ಲೀ. ಇದ್ದು, ಅವುಗಳಿಂದ ತಲಾ ಒಂದೊಂದು ಬಾಟಲ್ ಹಾಗೂ ಟಿನ್ನ್ನು ತೆಗೆದಿಟ್ಟು, 4 ಗಂಟೆಯಿಂದ 4.45 ರ ವರೆಗೆ ಸಾಕ್ಷಿದಾರರ ಹಾಗೂ ಆರೋಪಿಯ ಸಮಕ್ಷಮ ಪಂಚನಾಮೆ ಮಾಡಿ, ಸ್ಯಾಂಪಲ್ ತೆಗೆದ ಬಾಟಲುಗಳನ್ನು ಚಾಸಾ-4 ರವರ ಕೈಯಲ್ಲಿ ರಾಸಾಯನಿಕ ಪರೀಕ್ಷೆಗಾಗಿ ದಿ.13.06.2012 ರಂದು ಬೆಂಗಳೂರಿಗೆ ಕಳುಹಿಸಿ ಕೊಟ್ಟಿರುತ್ತೇನೆ. ದಿ.14.06.2012 ರಂದು ರಾಸಾಯನಿಕ ಪರೀಕ್ಷೆಗಾಗಿ ಕಳುಹಿಸಿದ ಮುದ್ದೆಮಾಲುಗಳನ್ನು ವಾಪಸ್ಸು ತರಿಸಿಕೊಂಡಿರುತ್ತೇನೆ. ಮುದ್ದೆ ಮಾಲುಗಳನ್ನು ಕಛೇರಿಯಲ್ಲಿ ನಾಶಪಡಿಸಿದೆ ಎಂದು ನುಡಿದಿರುತ್ತಾರೆ. ಸಾಕ್ಷಿಯು ದಾಳಿ ಪಂಚನಾಮೆ, ಮಾದರಿ ಸೀಲು, ಶೋಧನಾ ವಾರೆಂಟನ್ನು, ಪ್ರಥಮ ವರ್ತಮಾನ ವರದಿಯನ್ನು, ಇನ್ ವಾಯ್ಸನ್ನು, ಮಾಲುಪಟ್ಟಿಯನ್ನು, ರಾಸಾಯನಿಕ ಪರೀಕ್ಷೆಗಾಗಿ ಕಳುಹಿಸಿದ ಮುದ್ದೆಮಾಲುಗಳ ಪ್ರಮಾಣ ಪತ್ರವನ್ನು, ರಾಸಾಯನಿಕ ವಿಶ್ಲೇಷಣಾ ವರದಿಯನ್ನು ಮತ್ತು ಅದರಲ್ಲಿರುವ ತನ್ನ ಸಹಿಗಳನ್ನು ಗುರುತಿಸಿದ ಮೇರೆಗೆ ಅವುಗಳನ್ನು ನಿಪಿ-1 ರಿಂದ 8 ಎಂದು ಹಾಗೂ ಒಂದು ಸೀಸೆ ಮತ್ತು ಟಿನ್ನನ್ನು ಮುದ್ದೆಮಾಲು-1 ಮತ್ತು 2 ಎಂದು ದಾಖಲಾತಿ ಸಾಕ್ಷ್ಯಗಳನ್ನು ಗುರುತಿಸಲಾಯಿತು. ಆರೋಪಿ ಪಿರ ವಕೀಲರು ಪ್ರಾಸಾ-3 ರವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಿದಾಗ, ಸದರಿ ಸಾಕ್ಷಿಯು ಆರೋಪಿ ಪರ ವಕೀಲರು ಮಾಡಿದ ಎಲ್ಲ ಸಲಹೆಗಳನ್ನು ಅಲ್ಲಗಳೆದಿರುತ್ತಾರೆ.

10. ಚಾಸಾ-4/ಪ್ರಾಸಾ-4/ ಶ್ರೀ.ಬೋರಯ್ಯ ರವರು ರಾಸಾಯನಿಕ ಪರೀಕ್ಷಗೆ ವರದಿ ಕೊಟ್ಟು ತಂದವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ದಿಃ13.06.2012 ರಂದು ಅಬಕಾರಿ ನಿರೀಕ್ಷಕರ ಆದೇಶದ ಮೇರೆಗೆ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಮುದ್ದೆಮಾಲು-1 ಮತ್ತು 2 ನ್ನು ರಾಸಾಯನಿಕ ಪರೀಕ್ಷೆಗಾಗಿ ಬೆಂಗಳೂರಿಗೆ ತೆಗೆದುಕೊಂಡು ಹೋಗಿದ್ದು. ನಂತರ

ದಿ.14.06.2012 ರಂದು ವರದಿಯನ್ನು ಮತ್ತು ಮುದ್ದೆಮಾಲು-1 ಮತ್ತು 2ನ್ನು ಅಬಕಾರಿ ನಿರೀಕ್ಷಕರ ಕಛೇರಿಗೆ ತೆಗೆದುಕೊಂಡು ಬಂದಿರುತ್ತೇನೆ ಎಂದು ನುಡಿದಿರುತ್ತಾರೆ. ಸಾಕ್ಷಿಯು ನಿಪಿ-7 ಮತ್ತು ಅದರಲ್ಲಿರುವ ತನ್ನ ಸಹಿಯನ್ನು ಗುರುತಿಸಿದ ಮೇರೆಗೆ ನಿಪಿ-7(ಬಿ) ಎಂದು ದಾಖಲಾತಿ ಸಾಕ್ಷ್ಯವನ್ನು ಗುರುತಿಸಲಾಯಿತು. ಆರೋಪಿ ಪಿರ ವಕೀಲರು ಪ್ರಾಸಾ-4 ರವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಿದಾಗ, ಸದರಿ ಸಾಕ್ಷಿಯು ಆರೋಪಿ ಪರ ವಕೀಲರು ಮಾಡಿದ ಎಲ್ಲ ಸಲಹೆಗಳನ್ನು ಅಲ್ಲಗಳೆದಿರುತ್ತಾರೆ.

11. ಚಾಸಾ-3/ಪ್ರಾಸಾ-5/ಶ್ರೀ.ಕೆ.ಎನ್.ಗಣೇಶ್ ರವರು ಪಂಚನಾಮೆ ಸಾಕ್ಷಿದಾರರು ತಮ್ಮ ಮುಖ್ಯ ವಿಚಾರಣೆಯಲ್ಲಿ, ದಿಃ05.06.2012 ರಂದು ಚಾಸಾ-5 ರವರಿಗೆ ಮುಳ್ಳಹಳ್ಳಿ ಗ್ರಾಮದಲ್ಲಿ ಅಕ್ರಮವಾಗಿ ಮದ್ಯವನ್ನು ದಾಸ್ತಾನು ಮಾಡಿ ಮಾರಾಟ ಮಾಡುತ್ತಿದ್ದಾರೆಂದು ಬಂದ ಖಚಿತ ಮಾಹಿತಿ ಮೇರೆಗೆ, ಸ್ಥಳಕ್ಕೆ ಹೋಗಿ, ಗ್ರಾಮಸ್ಥರನ್ನು ಪಂಚರನ್ನಾಗಿ ಬರಮಾಡಿಕೊಂಡರು. ಗ್ರಾಮಸ್ಥರು ಒಪ್ಪಿಕೊಂಡಿದ್ದು, ಆರೋಪಿಯ ಅಂಗಡಿಯಲ್ಲಿ ಹೋಗಿ ನೋಡಲಾಗಿ, 180 ಎಂ.ಎಲ್. ನ 48 ಒರಿಜಿನಲ್ ಚಾಯ್ಸ್ ವಿಸ್ಕಿ ಮತ್ತು 330 ಎಂ.ಎಲ್.ನ 24 ಕಿಂಗ್ ಫಿಶರ್ ಸ್ಟ್ರಾಂಗ್ ಬಿಯರ್ ಸಿಕ್ಕಿದ್ದು, ಯಾವುದೇ ಪರವಾನಿಗೆ ಇಲ್ಲದೆ ಈ ರೀತಿ ದಾಸ್ತಾನು ಮಾಡುವುದು ಮತ್ತು ಮಾರಾಟ ಮಾಡುವುದು ಅಬಕಾರಿ ಕಾಯ್ದೆ ಅಡಿ ಶಿಕ್ಷಾರ್ಹ ಎಂದು ಆರೋಪಿಗೆ ತಿಳಿಸಿ ಆತನನ್ನು ದಸ್ತಗಿರಿ ಮಾಡಲಾಯಿತು. ನಂತರ ಪಂಚರ ಸಹಿಗಳನ್ನು ಪಡೆದು, ರಟ್ಟಿನ ಡಬ್ಬಿಗಳಲ್ಲಿನ 180 ಎಂ.ಎಲ್. ನ ಒಂದು ಒರಿಜಿನಲ್ ಚಾಯ್ಸ್ ವಿಸ್ಕಿ ಸೀಸೆ ಮತ್ತು 330 ಎಂ.ಎಲ್. ನ 1 ಕಿಂಗ್ ಫಿಶರ್ ಸ್ಟ್ರಾಂಗ್ ಬಿಯರ್ ಸೀಸೆಯನ್ನು ರಾಸಾಯನಿಕ ಪರೀಕ್ಷೆಗಾಗಿ ತೆಗೆದರು. ಅವುಗಳ ಮೇಲೆ ಪಂಚರ ಸಹಿ ಪಡೆದರು. ಸಂಜೆ 4 ರಿಂದ 4.45 ಗಂಟೆ

ಸಮಯದಲ್ಲಿ ಪಂಚನಾಮೆಯನ್ನು ಬರೆದೆವು ಎಂದು ನುಡಿದಿರುತ್ತಾರೆ. ಸಾಕ್ಷಿಯು ನಿಪಿ-1 ಮತ್ತು ಅದರಲ್ಲಿರುವ ತನ್ನ ಸಹಿಯನ್ನು ಗುರುತಿಸಿದ ಮೇರೆಗೆ ನಿಪಿ-1(ಬಿ) ಎಂದು ದಾಖಲಾತಿ ಸಾಕ್ಷ್ಯವನ್ನು ಗುರುತಿಸಲಾಯಿತು.. ಆರೋಪಿ ಪಿರ ವಕೀಲರು ಪ್ರಾಸಾ-5 ರವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಿದಾಗ, ಸದರಿ ಸಾಕ್ಷಿಯು ಆರೋಪಿ ಪರ ವಕೀಲರು ಮಾಡಿದ ಎಲ್ಲ ಸಲಹೆಗಳನ್ನು ಅಲ್ಲಗಳೆದಿರುತ್ತಾರೆ.

12. ಪ್ರಸ್ತುತ ಪ್ರಕರಣದಲ್ಲಿ ಅಭೀಯೊಜನೆಯ ಸಾಕ್ಷ್ಯವನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿ ನಿ.ಪಿ.1 ಪಂಚನಾಮೆ ಮೂಲಕ ಅರೋಪಿಯ ಬಳಿಯಿಂದ ಒಟ್ಟು 72 ಮಧ್ಯದ ಬಾಟಲುಗಳನ್ನು ವಶಪಡಿಸಿಕೊಳ್ಳಲಾಗಿರುತ್ತದೆ. ಸದರಿ ಮದ್ಯದ ಪ್ಯಾಕುಗಳ ಪೈಕಿ 2 ಬಾಟಲುಗಳನ್ನು ರಾಸಾಯನಿಕ ವಿಶ್ಲೇಷಕರ ಪರೀಕ್ಷೆಗೆ ಒಳಪಡಿಸಿದ್ದು ನಿ.ಪಿ.8 ರ ಪ್ರಕಾರ ಸದರಿ 2 ಮದ್ಯದ ಬಾಟಲುಗಳಲ್ಲಿ ಮದ್ಯ ಇರುವುದಾಗಿ ಕಂಡು ಬಂದಿರುತ್ತದೆ. ನಿ.ಪಿ.8 ರಂತೆ ಎರಡು ಮದ್ಯದ ಬಾಟಲುಗಳಲ್ಲಿ ಮದ್ಯ ಇರುವುದು ಸ್ಪಷ್ಟವಾಗಿ ಕಂಡುಬಂದಿರುತ್ತದೆ. ಆದರೆ ಉಳಿದಂತಹ 70 ಬಾಟಲುಗಳು ಅದೇ ರಟ್ಟಿನ ಬಾಕ್ಸಿನಲ್ಲಿ ಇದ್ದವು ಎಂಬ ಕಾರಣಕ್ಕೆ ಅವುಗಳಲ್ಲಿಯೂ ಕೂಡ ಮದ್ಯ ಇತ್ತು ಎಂದು ಪೂರ್ವ ಭಾವನೆ ತೆಗೆದುಕೊಳ್ಳಲು ಸಾಧ್ಯ ಇಲ್ಲ. ಪೋಲಿಸ್ ಅಧಿಕಾರಿಯನ್ನು ಹೊರತು ಪಡಿಸಿ. ಯಾವುದೇ ಪಂಚ ಅಥವಾ ಸ್ವತಂತ್ರ ಸಾಕ್ಷಿದಾರರು ಅಭಿಯೋಜನೆಯನ್ನು ಬೆಂಬಲಿಸಿರುವುದಿಲ್ಲ. ಈ ಪ್ರಕರಣದಲ್ಲಿ ಸ್ವತಂತ್ರ ಸಾಕ್ಷಿದಾರರ ಸಾಕ್ಷ್ಯವು ಮುಖ್ಯವಾಗಿರುತ್ತದೆ. ಮುಖ್ಯವಾಗಿ ಗಮನಿಸಬೇಕಾದ ಅಂಶವೇನೆಂದರೆ 72 ಬಾಟಲುಗಳ ಪೈಕಿ 2 ಬಾಟಲುಗಳನ್ನು ರಾಸಾಯನಿಕ ವಿಶ್ಲೇಷಕರ ಪರೀಕ್ಷೆಗೆ ಒಳಪಡಿಸಿ ಉಳಿದ 70 ಬಾಟಲುಗಳನ್ನು

ರಾಸಾಯನಿಕ ಪರೀಕ್ಷೆಗೆ ಒಳಪಡಿಸದೆ ಇರುವುದು ಅಭಿಯೋಜನೆಯ ಪ್ರಕರಣದ ಮೇಲೆ ಸಂಶಯ ಉದ್ಭವಿಸುತ್ತದೆ.

13. ಇಲ್ಲಿ ಗಮನಿಸಬೇಕಾದ ಅಂಶವೇನೆಂದರೆ ಅಬಕಾರಿ ಕಾಯ್ದೆ ಅಡಿಯಲ್ಲಿ ದಾಖಲಿಸಿದ ಪ್ರಕರಣದಲ್ಲಿ ದಾಳಿ ಮತ್ತು ಜಪ್ತಿ ಪಂಚನಾಮೆ ಮಹತ್ವದ ಪಾತ್ರವನ್ನು ವಹಿಸುತ್ತದೆ. ಅಭಿಯೋಜನೆಯ ಪ್ರಕರಣವು ದಾಳಿ ಮತ್ತು ಜಪ್ತಿ ಪಂಚನಾಮೆಯ ಮೇಲೆ ಅವಲಂಬಿತವಾಗಿರುತ್ತದೆ. ದಾಳಿ ಮತ್ತು ಜಪ್ತಿ ಪಂಚನಾಮೆಯನ್ನು ಸ್ವತಂತ್ರ ಸಾಕ್ಷಿದಾರರ ಸಮಕ್ಷಮ ಪೋಲೀಸರು ಮಾಡುವ ಕಾರಣ ಸದರಿ ದಾಖಲೆ ಹಾಗೂ ದಾಖಲೆಯನ್ನು ತಯಾರು ಮಾಡುವ ಸಮಯದಲ್ಲಿ ರುಜು ಮಾಡಿರುವ ಪ್ರಮುಖ ಸಾಕ್ಷಿದಾರರ ಸಾಕ್ಷ್ಯವು ಪ್ರಕರಣದಲ್ಲಿ ಅತ್ಯಂತ ಪ್ರಮುಖ ಸಾಕ್ಷಿ ಎಂದು ಎನಿಸಿಕೊಳ್ಳುತ್ತದೆ. ಆದರೆ ಈ ಪ್ರಕರಣದಲ್ಲಿ ಸ್ವತಂತ್ರ ಸಾಕ್ಷಿದಾರರಾಗಿರುವ ದಾಳಿ ಮತ್ತು ಜಪ್ತಿ ಪಂಚನಾಮೆಯ ಸಾಕ್ಷಿದಾರರು ಅಭಿಯೋಜನೆಯ ಪ್ರಕರಣವನ್ನು ಬೆಂಬಲಿಸಿ ಸಾಕ್ಷಿ ನುಡಿದಿರುವುದಿಲ್ಲ. ಆದ್ದರಿಂದ ಸದರಿ ಸಾಕ್ಷಿದಾರರ ಸಾಕ್ಷ್ಯದ ಆಧಾರದ ಮೇಲೆ ಅಭಿಯೋಜನೆಯು ಹೇಳುವಂತೆ ದಾಳಿ ಮಾಡಿ ಸ್ವತ್ತುಗಳನ್ನು ಜಪ್ತಿ ಪಡಿಸಿಕೊಳ್ಳಲಾಗಿದೆ ಎಂಬ ತೀರ್ಮಾನಕ್ಕೆ ಬರಲು ಸಾಧ್ಯವಾಗುವುದಿಲ್ಲ. ಪೋಲೀಸ ಸಾಕ್ಷಿದಾರರಾದ ಪ್ರಾಸಾ-3 ರಿಂದ 5 ರವರು ಅಭಿಯೋಜನೆಯ ಕೇಸಿಗೆ ಪೂರಕವಾಗಿ ಸಾಕ್ಷಿ ನುಡಿದಿರುವರು. ಆದರೆ ಪೋಲೀಸ್ ಸಾಕ್ಷಿದಾರರು ಪ್ರಕರಣದಲ್ಲಿ ಹಿತಾಶಕ್ತಿವುಳ್ಳ ಸಾಕ್ಷಿದಾರರು ಆಗಿರುವ ಕಾರಣ ಸದರಿಯವರ ಸಾಕ್ಷ್ಯದ ಆಧಾರದ ಮೇಲೆ ಮಾತ್ರ ಆರೋಪಿಯು ತಪಿತಸ್ಥ ಎಂದು ತೀರ್ಮಾನಕ್ಕೆ ಬರಲು ಸಾಧ್ಯವಾಗುವುದಿಲ್ಲ. ಹಿತಾಶಕ್ತಿ ಸಾಕ್ಷಿದಾರರು ನೀಡುವ ಸಾಕ್ಷ್ಯಕ್ಕೆ ಸ್ವತಂತ್ರ ಸಾಕ್ಷಿದಾರರಿಂದ ಬೆಂಬಲಿತ ಅಥವಾ ಪೂರಕ ಸಾಕ್ಷ್ಯವು ಅವಶ್ಯವಾಗಿ ಬೇಕಾಗುತ್ತದೆ. ಆದರೆ ಈ ಕೇಸಿನಲ್ಲಿ ಈಗಾಗಲೇ ಚರ್ಚಿಸಿರುವಂತೆ ಪಂಚ

ಸಾಕ್ಷಿದಾರರಾದ ಸ್ವತಂತ್ರ ಸಾಕ್ಷಿದಾರರು ಅಭಿಯೋಜನೆಯ ಕೇಸನ್ನು ಬೆಂಬಲಿಸಿ ಸಾಕ್ಷಿ ನುಡಿದಿರುವುದಿಲ್ಲ. ಆದ್ದರಿಂದ ಅರೋಪಿಯು ಅನಧಿಕೃತವಾಗಿ ತಯಾರಾದ ಮದ್ಯದ ಸ್ವಾಧೀನವನ್ನು ಹೊಂದಿದ್ದನು ಎಂದು ಹೇಳಲು ಬರುವುದಿಲ್ಲ. ಆದ್ದರಿಂದ ಈ ಪ್ರಕರಣದಲ್ಲಿ ಆರೋಪಿಯು ಕೃತ್ಯವನ್ನು ಎಸಗಿರುವನು ಎಂಬ ಪೂರ್ವಭಾವನೆಯನ್ನು ತಳೆಯಲು ಸಾಧ್ಯವಾಗುವುದಿಲ್ಲ. ಆದ್ದರಿಂದ ನ್ಯಾಯಾಲಯದ ಅಭಿಪ್ರಾಯದಲ್ಲಿ ಅಭಿಯೋಜನೆಯು ಆರೋಪಿಯ ವಿರುದ್ಧ ಮಾಡಲಾದ ಆಪಾದನೆಗಳನ್ನು ಸಂಶಯಾತೀತವಾಗಿ ರುಜುವಾತು ಪಡಿಸುವಲ್ಲಿ ವಿಫಲವಾಗಿರುತ್ತದೆ ಮತ್ತು ಆರೋಪಿಯು ಸದರಿ ಸಂಶಯದ ಲಾಭಕ್ಕೆ ಅರ್ಹನಿರುತ್ತಾನೆ. ಹಾಗಾಗಿ, ಅಂಶ **1** ನ್ನು ನಕಾರಾತ್ಮಕವಾಗಿ ಉತ್ತರಿಸಲಾಗಿದೆ.

14. <u>ಅಂಶ.**2** ಃ -</u> ಅಂಶ-1ಕ್ಕೆ ಸಂಬಂಧಿಸಿದಂತೆ ಮಾಡಿರುವ ಚರ್ಚೆಯ ಹಿನ್ನೆಲೆಯಲ್ಲಿ ಆರೋಪಿತನು ದೋಷಾರೋಪಣಾ ಪಟ್ಟಿಯಲ್ಲಿ ಕಾಣಿಸಿರುವಂತಹ ಶಿಕ್ಷಾರ್ಹ ಅಪರಾಧಗಳ ಆರೋಪಣೆಯಿಂದ ಮುಕ್ತರಾಗಲು ಅರ್ಹರಾಗಿದ್ದಾನೆಂದು ಅಭಿಪ್ರಾಯಪಟ್ಟು ಈ ಕೆಳಕಂಡಂತೆ ಆದೇಶ ಮಾಡಲಾಗಿದೆಃ

<u>ಆದೇಶ</u>

ಅಪರಾಧಿಕ ಪ್ರಕ್ರಿಯೆ ಸಂಹಿತೆ ಕಲಂ.248(1)ರಂತೆ ಪ್ರದತ್ತವಾದ ಅಧಿಕಾರದಂತೆ ಆರೋಪಿ ರವರ ವಿರುದ್ಧ ಹೂಡಲಾದ ಶಿಕ್ಷಾರ್ಹ ಅಪರಾಧಗಳಾದ ಕರ್ನಾಟಕ ಅಬಕಾರಿ ಕಾಯ್ದೆ 1965 ಕಲಂ.11, 13, 14, 32, 34 ಮತ್ತು 43 ರಡಿಯಲ್ಲಿ ದಾಖಲಾದ ಆರೋಪದಿಂದ ಆರೋಪಿಯನ್ನು ದೋಷಮುಕ್ತಗೊಳಿಸಿ ಬಿಡುಗಡೆಗೊಳಿಸಿದೆ.

ಆರೋಪಿ ರವರ ಹಾಗೂ ಜಾಮೀನುದಾರರ ಜಾಮೀನು ಮುಚ್ಚಳಿಕೆಯನ್ನು ಅಪೀಲು ಕಾಲಾವಧಿ ಮುಗಿದ ನಂತರ ರದ್ದುಗೊಳಿಸಿದೆ.

ಮುದ್ದೆಮಾಲು-1 ಮತ್ತು 2 ರಲ್ಲಿ ಇರುವ ಬಾಟಲುಗಳು ಅನುಪಯುಕ್ತ ವಸ್ತುವಾಗಿದ್ದು ಮೇಲ್ಮನವಿ ಅವಧಿಯ ಮುಕ್ತಾಯದ ನಂತರ ನಾಶಪಡಿಸಲು ಆದೇಶಿಸಲಾಗಿದೆ.

ದಂಡ ಪ್ರಕ್ರಿಯಾ ಸಂಹಿತೆ ಕಲಂ.437(ಎ) ರಡಿಯಲ್ಲಿ ಆರೋಪಿ ರವರ ಜಾಮೀನುದಾರರ ಜಾಮೀನು ಮುಚ್ಚಳಿಕೆಯನ್ನು ಅಪೀಲು ಕಾಲಾವಧಿ ಮುಗಿದ ನಂತರ ರದ್ದುಗೊಳಿಸಲು ಆದೇಶಿಸಲಾಗಿದೆ.

(ಶೀಘ್ರಲಿಪಿಗಾರರಿಗೆ ಉಕ್ತಲೇಖನ ನೀಡಿ, ಅವರು ಬೆರಳಚ್ಚು ಮಾಡಿದ ನಂತರ ಅದನ್ನು ಪರಿಷ್ಕರಿಸಿ, ತಿದ್ದುಪಡಿ ಮಾಡಿ ಈ ದಿವಸ ಅಂದರೆ ದಿನಾಂಕ **05** ನೇ ಫೆಬ್ರವರಿ **2024** ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿದೆ.)

ಸಹಿ/-
**(ಸವಿತ ರುದ್ರಗೌಡ ಚಿಕ್ಕನಗೌಡರ್)**
**1 ನೇ ಅಪರ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ., ಕನಕಪುರ.**

## ಅನುಬಂಧ

1. **ಅಭಿಯೋಜನಾ ಪರ ವಿಚಾರಣೆಗೊಳಪಟ್ಟ ಸಾಕ್ಷಿದಾರರ ಪಟ್ಟಿ.**

ಪ್ರಾಸಾ-1/ಚಾಸಾ-1 ಃ ಮಹದೇವಯ್ಯ

ಪ್ರಾಸಾ-2/ಚಾಸಾ-2 ಃ ಚಿಕ್ಕಮಾಳಗಯ್ಯ

ಪ್ರಾಸಾ-3/ಚಾಸಾ-5 ಃ ಕೇಶವಮೂರ್ತಿ

ಪ್ರಾಸಾ-4/ಚಾಸಾ-4 ಃ ಬೋರಯ್ಯ

ಪ್ರಾಸಾ-5/ಚಾಸಾ-3 ಃ ಕೆ.ಎನ್.ಗಣೇಶ್

2. **ಅಭಿಯೋಜನೆಯ ಪರ ಗುರುತಿಸಲ್ಪಟ್ಟ ದಾಖಲೆಗಳ ವಿವರ :**

| | | |
|---|---|---|
| ನಿ.ಪಿ.1 | ಃ | ದಾಳಿ ಪಂಚನಾಮೆ |
| ನಿ.ಪಿ.1(ಎ) | ಃ | ಪ್ರಾಸಾ-3 ರವರ ಸಹಿ |
| ನಿ.ಪಿ.1(ಬಿ) | ಃ | ಪ್ರಾಸಾ-5 ರವರ ಸಹಿ |
| ನಿ.ಪಿ.2 | ಃ | ಮಾದರಿ ಸೀಲು |
| ನಿ.ಪಿ.2(ಎ) | ಃ | ಪ್ರಾಸಾ-3 ರವರ ಸಹಿ |
| ನಿ.ಪಿ.3 | ಃ | ಶೋಧನಾ ವಾರೆಂಟ್ |
| ನಿ.ಪಿ.3(ಎ) | ಃ | ಪ್ರಾಸಾ-3 ರವರ ಸಹಿ |
| ನಿ.ಪಿ.4 | ಃ | ಪ್ರಥಮ ವರ್ತಮಾನ ವರದಿ |
| ನಿ.ಪಿ.4(ಎ) | ಃ | ಪ್ರಾಸಾ-3 ರವರ ಸಹಿ |
| ನಿ.ಪಿ.5 | ಃ | ಇನ್ ವಾಯ್ಸ್ |
| ನಿ.ಪಿ.5(ಎ) | ಃ | ಪ್ರಾಸಾ-3 ರವರ ಸಹಿ |
| ನಿ.ಪಿ.6 | ಃ | ಮಾಲುಪಟ್ಟಿ |
| ನಿ.ಪಿ.6(ಎ) | ಃ | ಪ್ರಾಸಾ-3 ರವರ ಸಹಿ |
| ನಿ.ಪಿ.7 | ಃ | ರಾಸಾಯನಿಕ ಪರೀಕ್ಷಗೆ ಕಳುಹಿಸಿದ ಪತ್ರ |
| ನಿ.ಪಿ.7(ಎ) | ಃ | ಪ್ರಾಸಾ-3 ರವರ ಸಹಿ |
| ನಿ.ಪಿ.7(ಬಿ) | ಃ | ಪ್ರಾಸಾ-4 ರವರ ಸಹಿ |
| ನಿ.ಪಿ.8 | ಃ | ರಾಸಾಯನಿಕ ವಿಶ್ಲೇಷಣಾ ವರದಿ |
| ನಿ.ಪಿ.8(ಎ) | ಃ | ಪ್ರಾಸಾ-3 ರವರ ಸಹಿ |

3. **ಅಭಿಯೋಜನಾ ಪರ ವಿಚಾರಣೆಗೊಳಪಟ್ಟ ಸಾಕ್ಷಿದಾರರ ವಿವರ:**

-- ಇಲ್ಲಾ --

4. <u>ಆರೋಪಿತರ ಪರ ಗುರುತಿಸಲ್ಪಟ್ಟ ದಾಖಲೆಗಳ ವಿವರ</u> :

-- ಇಲ್ಲಾ --

5. <u>ಅಭಿಯೋಜನೆಯು ಗುರುತಿಸಿರುವ ಮುದ್ದೆ ಮಾಲುಗಳ ಪಟ್ಟಿ</u>

ಮುದ್ದೆಮಾಲು-1 ಮತ್ತು 2 ಃ ಬಾಟಲುಗಳು

ಸಹಿ/-
**1 ನೇ ಅಪರ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ., ಕನಕಪುರ.**

**~*~*~*~*~**